# ಸಹಕಾರಿ ಆಸ್ಪತ್ರೆ



ಆಸ್ಪತ್ರೆ! ಆಧುನಿಕ ಸಂದರ್ಭದಲ್ಲಿ ಜನಸಾಮಾನ್ಯರನ್ನು ಬೆಚ್ಚಿಬೀಳಿಸುವ ಸಂಗತಿಗಳಲ್ಲಿ ಆಸ್ಪತ್ರೆಯೂ ಒಂದು. ಈ ಆತಂಕಕ್ಕೆ ಅನಾರೋಗ್ಯವೊಂದೇ ಕಾರಣವಲ್ಲ, ವೈದ್ಯಕೀಯ ಸೇವೆಗಳು ದುಬಾರಿಯಾಗಿರುವುದೂ ಕಾರಣ. ಸರ್ಕಾರಿ ವ್ಯವಸ್ಥೆಯತ್ತ ಕಣ್ಣುಹಾಯಿಸಿದರೆ, ಆ ವ್ಯವಸ್ಥೆಯ ಬಹುತೇಕ ಆಸ್ಪತ್ರೆಗಳ ಆರೋಗ್ಯವೇ ಸರಿಯಾಗಿಲ್ಲ. ಇಂಥ ಸಂದರ್ಭದಲ್ಲಿ ನಮ್ಮ ಗಮನ ಆರೋಗ್ಯಕ್ಷೇತ್ರದ ಪರ್ಯಾಯ ಸಾಧ್ಯತೆಗಳತ್ತ ಹರಿಯಬೇಕು. ಅಂಥ ಪರ್ಯಾಯ ಸಾಧ್ಯತೆಗಳಲ್ಲೊಂದು – ಸಹಕಾರಿ ಕ್ಷೇತ್ರ. ಕೊರೊನಾ ವೈರಾಣುವಿನ ವಿರುದ್ಧದ ಹೋರಾಟ ಸಹಕಾರಿ ಆಸ್ಪತ್ರೆಗಳ ಮಹತ್ವವನ್ನು ಮತ್ತೆ ಮುನ್ನೆಲೆಗೆ ತಂದಿದೆ. ಜನರಿಂದ ಜನರಿಗಾಗಿ ಎನ್ನುವ ಸಹಕಾರಿ ತತ್ವ ಆರೋಗ್ಯಕ್ಷೇತ್ರದಲ್ಲೂ ಯಶಸ್ವಿಯಾಗಬಲ್ಲದು ಎನ್ನುವುದಕ್ಕೆ ನಮ್ಮ ನಡುವೆಯೇ ಉದಾಹರಣೆಗಳಿವೆ. ಹಂಚಿಕೊಂಡು ತಿನ್ನುವ ಅಗತ್ಯ ಮತ್ತು ಮಹತ್ವವನ್ನು ಕೊರೊನಾ ಕಾಲಘಟ್ಟ ಮತ್ತೆ ಮುನ್ನೆಲೆಗೆ ತಂದಿದೆ. ಈ ಹಂಚಿಕೊಂಡು ಬಾಳುವ ಆಶಯಕ್ಕೂ ಸಹಕಾರಿ ಆಸ್ಪತ್ರೆಗಳು ಪೂರಕ.

■ ಸ್ವಯಂಪ್ರಭಾ